ಆ)

| ಕಾಲೇಜಿನ ಸ್ಥಳ | ಕಾಮಗಾರಿಯ ವಿವರ | ಕೊಠಡಿ ಸಂಖ್ಯೆ/ ಶೌಚಾಲಯ | ಅಂದಾಜು ಮೊತ್ತ (ಲಕ್ಷ ರೂ ಗಳಲ್ಲಿ) | ಒದಗಿಸಲಾಗಿರುವ ಅನುದಾನ (ಲಕ್ಷ ರೂ.ಗಳಲ್ಲಿ) |
|---|---|---|---|---|
| ಚನ್ನರಾಯಪಟ್ಟಣ | ಪ್ರಯೋಗಾಲಯ | 01 | 18.00 | 5.40 |
| | ಶೌಚಾಲಯ | 02 | 24.00 | 24.00 |
| ಉದಯಪುರ | ತರಗತಿ ಕೊಠಡಿ | 03 | 51.00 | 14.00 |

ಇ) ಪ್ರಸ್ತುತ ಅಗತ್ಯತೆಗನುಸಾರವಾಗಿ ಮೇಲ್ಕಾಣಿಸಿದಂತೆ ಕೊಠಡಿಗಳನ್ನು ನಿರ್ಮಿಸಲು ಅಗತ್ಯ ಕ್ರಮಕ್ಕೈಗೊಳ್ಳಲಾಗಿದೆ

ಈ) ಕ್ರಮ ಕೈಗೊಳ್ಳಲಾಗುತ್ತಿದೆ.

**ಕುಡಿಯುವ ನೀರಿಗೆ ಕೇಂದ್ರ ಸರ್ಕಾರದಿಂದ ಬಂದಿರುವ ಅನುದಾನ**

**1328(1424); ಶ್ರೀ ಬಾಲಕೃಷ್ಣ ಸಿ.ಎನ್. (ಶ್ರವಣಬೆಳಗೊಳ)**

ಅ) ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಗ್ರಾಮೀಣ ಕುಡಿಯುವ ನೀರಿನ ಯೋಜನೆಗಾಗಿ ಕೇಂದ್ರ ಸರ್ಕಾರದಿಂದ ಬಂದಿರುವ ಅನುದಾನದ ಮೊತ್ತವೆಷ್ಟು (ವರ್ಷವಾರು ವಿವರ ನೀಡುವುದು);

ಆ) ಕೇಂದ್ರ ಸರ್ಕಾರದಿಂದ ಬಂದ ಅನುದಾನವನ್ನು ಎಲ್ಲಾ ಜಿಲ್ಲೆಗಳಿಗೂ ಸಮಾನವಾಗಿ ಹಂಚಿಕೆ ಮಾಡಲಾಗಿದೆಯೇ;

ಇ) ಹಾಗಿದ್ದಲ್ಲಿ, ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಈ ಅನುದಾನವನ್ನು ಸಮರ್ಪಕವಾಗಿ ಬಳಕೆ ಮಾಡಿಕೊಂಡು ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಲು ಕ್ರಮ ಕೈಗೊಂಡಿದ್ದಾರೆಯೇ (ಸಂಪೂರ್ಣ ವಿವರ ನೀಡುವುದು);

ಈ) ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಯೋಜನೆಗೆ ಕೇಂದ್ರ ಸರ್ಕಾರ ನೀಡಿದ್ದ ಅನುದಾನವು ಸಮರ್ಪಕವಾಗಿ ಖರ್ಚಾಗದೆ ವಾಪಸ್ಸು ಹೋಗಿರುವುದು ನಿಜವೇ; ಹಾಗಿದ್ದಲ್ಲಿ, ಎಷ್ಟು ಅನುದಾನವು ವಾಪಸ್ಸು ಹೋಗಿದೆ (ವಿವರ ನೀಡುವುದು);

ಉ) ಕೇಂದ್ರ ಸರ್ಕಾರ ನೀಡಿದ್ದ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳದ ಹಾಗೂ ಗ್ರಾಮೀಣ ಪ್ರದೇಶಗಳಿಗೆ ನೀರನ್ನು ಪೂರೈಸುವಲ್ಲಿ ವಿಫಲರಾದ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು (ಜಿಲ್ಲಾವಾರು, ವರ್ಷವಾರು ಮಾಹಿತಿ ನೀಡುವುದು)?

**ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)**

ಅ) ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಗ್ರಾಮೀಣ ಕುಡಿಯುವ ನೀರಿನ ಯೋಜನೆಗಾಗಿ ಕೇಂದ್ರ ಸರ್ಕಾರದಿಂದ ಬಂದಿರುವ ಅನುದಾನದ ವಿವರಗಳು ಈ ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)

| ಕ್ರ ಸಂ | ಸಾಲು | ಕೇಂದ್ರ ಅನುದಾನ | |
|---|---|---|---|
| | | ಆರಂಭಿಕ ಶಿಲ್ಕು | ಬಿಡುಗಡೆ |
| 1. | 2011–12 | 32199.78 | 66777.81 |
| 2. | 2012–13 | 20693.00 | 84249.10 |
| 3. | 2013–14 | 20609.70 | 88116.01 |

ಆ) ಕೇಂದ್ರ ಸರ್ಕಾರದಿಂದ ಬಂದ ಅನುದಾನವನ್ನು NRDWP (ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಯೋಜನೆ) ಮಾರ್ಗಸೂಚಿಗಳಂತೆ ಗ್ರಾಮೀಣ ಜನಸಂಖ್ಯೆ ಹಾಗೂ ಜನವಸತಿಗಳಲ್ಲಿನ ಹಾಲಿ ಇರುವ ಕುಡಿಯುವ ನೀರಿನ ಲಭ್ಯತೆಗನುಗುಣವಾಗಿ ಅಗತ್ಯತೆಯನುಸಾರ ಹಂಚಿಕೆ ಮಾಡಲಾಗುತ್ತಿದೆ.

ಇ) NRDWP ಅನುದಾನವನ್ನು ಆಯಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ ಗ್ರಾಮೀಣ ಕುಡಿಯುವ ನೀರಿನ ಇಂಜಿನಿಯರಿಂಗ್ ವಿಭಾಗಗಳು ಅನುಮೋದಿತ ಕ್ರಿಯಾಯೋಜನೆಯಂತೆ ಕುಡಿಯುವ ನೀರಿನ ಯೋಜನೆಗಳಿಗಾಗಿ ಸಮರ್ಪಕವಾಗಿ ವಿನಿಯೋಗಿಸುತ್ತವೆ.

ಈ) ಕೇಂದ್ರ ಸರ್ಕಾರದಿಂದ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ (NRDWP) ಕಾರ್ಯಕ್ರಮದಡಿ ಸ್ವೀಕೃತವಾದ ಅನುದಾನ ವ್ಯಪಗತವಾಗುವುದಿಲ್ಲ. ಆಯಾ ಸಾಲಿನಲ್ಲಿ ವೆಚ್ಚವಾಗದೇ ಉಳಿದ ಅನುದಾನವನ್ನು ಮುಂದಿನ ಸಾಲಿನ ಆರಂಭಿಕ ಶಿಲ್ಕು ಎಂದು ಪರಿಗಣಿಸಿ ಬಳಕೆಮಾಡಲಾಗುತ್ತಿದೆ.

ಉ) ರಾಜ್ಯದ ಆರ್ಥಿಕ ಪ್ರಗತಿ ಶೇಕಡ 86 ರಿಂದ 95 ಇದೆ. ಆರ್ಥಿಕ ಸಾಲಿನ ವರ್ಷಾಂತ್ಯದಲ್ಲಿ ಸ್ವೀಕೃತವಾದ ಅನುದಾನವನ್ನು ಮುಂದಿನ ಸಾಲಿನಲ್ಲಿ ಮುಂದುವರಿದ ಹಾಗೂ ಅನುಮೋದಿತ ಯೋಜನೆಗಳಿಗೆ ಉಪಯೋಗಿಸಲು ಅವಕಾಶವಿರುವುದರಿಂದ ಮತ್ತು ವಾಸ್ತವಿಕ ಭೌತಿಕ ಪ್ರಗತಿ ಆಧರಿಸಿ ಬಿಲ್ ಪಾವತಿಯಾಗಬೇಕಾಗಿರುವ ಕಾರಣದಿಂದ, ಈ ಪ್ರಶ್ನೆ ಉದ್ಭವಿಸುವುದಿಲ್ಲ.